ನಿಜವಾಗಿ ಜಮೀನಿಲ್ಲದವರು ಯಾರು ಯಾರು ಎಂಬುದನ್ನು ನೋಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಭೂಮಿಯನ್ನು ಈಗಾಗಲೇ ಅವರ ವಶಕ್ಕೆ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಕೊಟ್ಟಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಗುವಳಿ ಚೀಟಿ ಕೊಟ್ಟಿದ್ದೀರಾ ಅಥವಾ ಇಲ್ಲವೇ ?

ಶ್ರೀ ಬಿ. ರಾಚಯ್ಯ.—ಇಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಇಂಥ ಸಂದರ್ಭಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ನಡೆದದ್ದು ಸರ್ಕಾರದ ಗಮನಕ್ಕೆ ಬಂದಿವೆಯೇ ?

Sri B. RACHIAH.—Does not arise.

ಶ್ರೀ ಕೆ. ಲಕ್ಕಪ್ಪ.—ಸಾಗುವಳಿ ಚೀಟಿ ಕೊಟ್ಟಿರುವುದು ಲಿಂಗೇಗೌಡರಿಗೆ ಎಂದು ಇಲ್ಲಿ ಹೇಳಿದೆಯಲ್ಲಾ !

ಶ್ರೀ ಬಿ. ರಾಚಯ್ಯ.—ಸರ್ಕಾರಿ ಆಜ್ಞೆಯಲ್ಲ ಇಂತಿಂಥವರಿಗೆ ಕೊಡುವುದೆಂದು ಹೇಳಿದೆ, ಅಷ್ಟೇ.

ಶ್ರೀ ಬಿ. ಹುಚ್ಚೇಗೌಡ.—ಸಾಮಾನ್ಯವಾಗಿ ರೆವಿನ್ಯೂ ಇಲಾಖೆಯವರು ರಿಕಾರ್ಡ್‌ಗಳನ್ನು ನೋಡಿ ಒಪ್ಪಿಗೆ ಕೊಡಬಹುದೆಂದು ಹೇಳುತ್ತಾರೆ. ಫಾರೆಸ್ಟ್ ಇಲಾಖೆಯವರು ಜಮೀನನ್ನು ಸ್ಥಳ ಪರೀಕ್ಷೆ ಮಾಡಿ yield ಕಡಮೆ ಇದ್ದರೆ ಮತ್ತು ಒತ್ತಡ ಹೆಚ್ಚಿಗೆ ಇದ್ದರೆ ಕೊಡಬಹುದೆಂದು ಹೇಳುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ 760 ಎಕರೆ ಜಮೀನಿನೊಳಗೆ ದರಖಾಸ್ತು ರೂಲ್ಸ್ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಎಷ್ಟು ಎಕರೆ ಜಮೀನುಗಳನ್ನು ಕೊಟ್ಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ದರಖಾಸ್ತು ರೂಲ್ಸನ್ನು ಅನುಸರಿಸದೇ ಇರುವುದರಿಂದ ಅದನ್ನು ಪುನರ್ವಿಮರ್ಶೆ ಮಾಡಬೇಕೆಂದು ನೂಚನೆ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಈ ರೀತಿ ದರಖಾಸ್ತು ರೂಲ್ಸನ್ನು ಅನುಸರಿಸದೆಯೇ ಜಮೀನುಗಳನ್ನು ಕೊಟ್ಟಿರುವ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಅದನ್ನು ಮುಂದೆ ಯೋಚನೆ ಮಾಡೋಣ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈಗ ಪುನರ್ವಿಮರ್ಶೆಯಾದ ಮೇಲೆ ಜಾಗ್ರತೆಯಾಗಿ ಜಮೀನುಗಳನ್ನು ಕೊಡುತ್ತೀರೋ ?

ಶ್ರೀ ಬಿ. ರಾಚಯ್ಯ.—ಆ ಜಮೀನುಗಳನ್ನು ರೆವಿನ್ಯೂ ಇಲಾಖೆಯವರು ರೂಲ್ಸ್‌ಪ್ರಾಕಾರ ಕೊಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಈಗ ಉತ್ತರದಲ್ಲಿ ಹೇಳಿರುವ ಹೆಸರುಗಳ ಪೈಕಿ ಯಾರಾದರೂ insufficient holders ಇದ್ದರೆ, ಅವರ ವಿಚಾರವನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಆ ಸ್ಥಳದಲ್ಲಿ ಯಾರು ಜಮೀನು ಇಲ್ಲದವರು ಇದ್ದಾರೋ ಮತ್ತು ಯಾರು ಜಮೀನು ಇಲ್ಲದ ಹರಿಜನರು ಇದ್ದಾರೋ ಅಂತಹವರಿಗೆ ಮೊದಲು ಜಮೀನುಗಳನ್ನು ಕೊಟ್ಟು ಆಮೇಲೆ insufficient holders next priorityಯಲ್ಲಿ ಬರುತ್ತಾರೆ.

—

Providing of Drinking Water Facilities to Chickmagalur Town.

*Q.—180. **Smt. B. L. SUBBAMMA** (Chickmagalur).—

Will the Government be pleased to state:—

(*a*) the action taken by them to provide drinking water facilities to Chickmagalur Town ;

(*b*) whether they have taken any action to implement the scheme successfully ;

(*c*) whether they intend to depute the Chief Engineer of P. W. D., to investigate the scheme ?

A.—**Sri VEERENDRA PATIL** (Minister for Public Works).—

(*a*) Necessary action has been taken to sanction the estimates for increasing the capacity of water supply tank and for replacing the existing main with 12" diameter raising main, etc.

(*b*) Yes.

(*c*) Does not arise in view of reply to (*b*).

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಟೌನಿಗೆ ಇನ್ನೆಷ್ಟು ವರ್ಷಗಳ ತನಕ ನೀರು ಸಪ್ಲೈ ಮಾಡುವುದಕ್ಕಾಗುವುದಿಲ್ಲ ?

†ಶ್ರೀ ವೀರೇಂದ್ರ ಪಾಟೀಲ್.—ನೀರು ಸರಬರಾಜು ಮಾಡುವ ಕೆಲಸ ನಡೆದಿದೆ. ಕೆಲಸ ಪ್ರೋಗ್ರೆಸ್ಸಿನಲ್ಲಿದೆ. ಕೆಲಸ ಪೂರ್ತಿಯಾಗುವ ವರೆಗೂ ನೀರು ಹೇಗೆ ಬರುವುದು ಸಾಧ್ಯ ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕೆಲಸ ಪ್ರಾರಂಭವಾಗಿ ಈಗ್ಗೆ 2 ವರ್ಷಗಳಾದರೂ ಆ ಕೆಲಸದಲ್ಲಿ $\frac{1}{4}$ ಭಾಗ ಕೆಲಸ ಆಥವಾ $\frac{1}{3}$ ಭಾಗ ಕೆಲಸವೂ ಪೂರ್ಣವಾಗಿಲ್ಲ. ಆದ್ದರಿಂದ ಜಾಗ್ರತೆಯಾಗಿ ಈ ಕೆಲಸ ಮಾಡಿಸಲು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೆಲಸ ಜಾಗ್ರತೆಯಾಗುವುದರ ಸಲುವಾಗಿ ಸಾಧ್ಯವಾದಷ್ಟು ಕ್ರಮಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ 7 ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಖರ್ಚುಮಾಡಿದ್ದೇವೆ. ಈ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಬೇಕೆಂಬ ಉದ್ದೇಶದಿಂದ ನಾಲ್ಕು ಸಲ ಟೆಂಡರು ಕರೆದರೂ ಯಾರೂ ಬರಲಿಲ್ಲ. ಆದಕಾರಣ ಬೆಂಗಳೂರಿನಿಂದ ಕಂಟ್ರಾಕ್ಟರುಗಳನ್ನು ಕರೆಯಿಸಿಕೊಂಡು ಕೆಲಸಕ್ಕೆ ಹಚ್ಚಬೇಕಾಯಿತು. ಇಲಾಖೆಯವರೇ ಆ ಕೆಲಸವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ನನ್ನ ಅನುಭವದ ಪ್ರಕಾರ ಜೂ ಕ್ 63 ರೊಳಗೆ ನೀರು ಪೂರೈಸಬೇಕು ಎಂಬುದಾಗಿ ಇದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಈಗ ನೀವು ಈ ಯೋಜನೆಯನ್ನು ಹಾಕಿರುವುದರಿಂದ ಎಷ್ಟು ಗ್ಯಾಲನ್ ನೀರು ಸರಬರಾಜು ಮಾಡುವ ಯೋಚನೆಯನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಯನ್ನು ಹಾಕಿದ್ದು ಅಲ್ಲಿ ಪ್ರಾಸ್ಪೆಕ್ಟಿವ್ ಪಾಪ್ಯುಲೇಷನ್ 60 ಸಾವಿರದ ವರೆಗೂ ಇರುವ ಕಾರಣ. ಆದರೆ ಪ್ರತಿ ದಿವಸವೂ 20 ಗ್ಯಾಲನ್ ಪರ್ ಕ್ಯಾಪಿಟಾ ನೀರು ಸರಬರಾಜು ಆಗಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1963ನೇ ಜೂನ್ ನೊಳಗೆ ನೀವು ಆ ಕೆಲಸ ಪೂರ್ಣವಾಗುತ್ತದೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆಗಲಾದರೂ ನೀರನ್ನು ಆ ಟೌನಿಗೆ ಒದಗಿಸಿ ಕೊಡಲಕ್ಕಾಗುತ್ತದೆಯೆ ?

. ಶ್ರೀ ವೀರೇಂದ್ರ ಪಾಟೀಲ್. ಕೆಲಸ ಪೂರ್ಣವಾದ ಕೂಡಲೇ ನೀರು ಒದಗಿಸಿ ಕೊಡುತ್ತೇವೆಂದು ನಾನು ಆಗಲೇ ಹೇಳಿದ್ದೇನೆ.

Repairs to the Road leading to Kuruvangi Village, Kasaba Hobli, Chickmagalur Taluk.

*Q.—276. Smt. B. L. SUBBAMMA (Chickmagalur).—

Will the Government be pleased to to state :—

(*a*) whether they are aware that the road leading to Kuruvangi village, Kasaba Hobli, Chickmagalur Taluk, is not fit for traffic;

(*b*) if so, whether they will take early steps to make the road fit for traffic ?

*A.—Sri RAMAKRISHNA HEGDE (Minister for Co-operation and Development).—

(*a*) Yes.

(*b*) The road being a village approach road, improvement and maintenance have to be done by the concerned Village Panchayat.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ರಸ್ತೆ ಸಂಚಾರಕ್ಕೆ ಯೋಗ್ಯವೆಂದು ತಿಳಿದ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

†Sri KONDAJJI BASAPPA.—It is a road which is within the limits of the Village Panchayat. It is obligatory on the part of the Village Panchayat to ake up that road.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಗಾದರೆ ಇದರ ಖರ್ಚಿಗೆ ಈಗ ಅಂದಾಜು ಮಾಡಿರುವ ಹಣ ಸರಿಯೆಂದು ಹೇಳುತ್ತೀರಾ ?

Sri KONDAJJI BASAPPA.—No estimate is prepared as yet.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅಂದಾಜು ಇಲ್ಲದೆ ವಿಲೇಜ್ ಪಂಚಾಯಿತಿಯವರು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದೇ ಸರ್ಕಾರದವರನ್ನು ಈಗ ಕೇಳುತ್ತಿರುವುದು ಎಂಬುದು ಸರ್ಕಾರಕ್ಕೆ ತಿಳಿದಿಲ್ಲವೇ ?

Sri KONDAJJI BASAPPA.—This village is covered under the C. D. scheme. Once the Deputy Commissioner made certain allotments for that particular road and the villagers did not come forward with their contribution. So, the work could not be done.

ಶ್ರೀ ಕೆ. ಲಕ್ಕಪ್ಪ.—ಅಪ್ರೋಚ್ ರಸ್ತೆಗಳನ್ನು ಗ್ರಾಮಪಂಚಾಯತಿಯವರು ಮಾಡಿನಬೇಕೆಂದು ಹೇಳಿದ್ದೀರಿ. ಗ್ರಾಮಪಂಚಾಯತಿಯವರಲ್ಲಾಗಲೀ ಅಥವಾ ತಾಲ್ಲೂಕ್ ಬೋರ್ಡ್‌ನವರಲ್ಲಾಗಲೀ ಹಣ ಎಲ್ಲದಿದ್ದರೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೀ ?

Sri KONDAJJI BASAPPA.—Government can make special grants.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ತಾಲ್ಲೂಕ್ ಬೋರ್ಡುಗಳಲ್ಲಿ ರಸ್ತೆಗಳ ದುರಸ್ತಿಗೋಸ್ಕರ ಸಾಕಷ್ಟು ಹಣವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—I want notice.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಬಗ್ಗೆ ಅಂದಾಜು ಮಾಡಿ ಕಳುಹಿಸಿದ ಮೇಲೆ ಗ್ರಾಮಪಂಚಾಯಿತಿಯವರು ಈ ಕೆಲಸವನ್ನು ಕೈಗೊಳ್ಳುವಾಗ ಸರ್ಕಾರದವರು ಸಹಾಯಮಾಡುತ್ತಾರೆಯೇ ?

Sri KONDAJJI BASAPPA.—The matter will be looked into.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಲೆನಾಡು ಪ್ರದೇಶಗಳಲ್ಲಿ ಹಿಂದೆ ರಸ್ತೆಗಳನ್ನು ನಿರ್ಮಾಣ ಮಾಡುವಾಗ್ಗೆ ಹಿಂದಿನ ಮಂತ್ರಿಮಂಡಲದ ಕಾಲದಲ್ಲಿ ಒಂದು ಮಲೆನಾಡು ಡೇವಲಪ್‌ಮೆಂಟ್ ಬೋರ್ಡ್ ಎಂಬುದು ಇತ್ತು. ಅದನ್ನೇನಾದರೂ ಈಗ ರಿವೈವ್ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆಯೇ ?

Sri KONDAJJI BASAPPA.—That question does not arise.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದೆ ಮಲೆನಾಡಿಗೆ ಸಂಬಂಧಪಟ್ಟ ಹಾಗೆ ಒಂದು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು ಇತ್ತು. ಅದನ್ನು ಮತ್ತೆ ಸರ್ಕಾರದವರು ಈಗ ರಿವೈವ್ ಮಾಡುತ್ತಾರೆಯೇ ?

Sri KONDAJJI BASAPPA.—The suggestion of the Hon'ble Member will be considered.

Mr. SPEAKER.—Question howr is over.

Business of the House

Mr. SPEAKER.—I have to mention one thing. Yesterday I had stated that not only this list but two more questions from the succeeding list also would be included and the Members must have seen that it was not done. I owe an explanation as to why it was not